## ಕಥೆ

ಮುಂದೆ ಕನಸೇ? ಹೊಸ ಯಜಮಾನ ತನಗೆ ಯಾವ ಗತಿ ಕಾಣಿಸುತ್ತಾನೋ? ಎಷ್ಟೆಲ್ಲಾ ಕಥೆಗಳು, ಪ್ರೀತಿಯ, ಮೌನದ ಭಾಷೆಗಳು. 'ಬೇಡ ಯಜಮಾನರೇ, ನಾನು ನನ್ನ ಸ್ನೇಹಿತರು ನಿಮ್ಮ ಹೋಟೆಲನ್ನು ವ್ಯವಹಾರದ ಸ್ಥಳ ಎಂದಲ್ಲ, ನಮ್ಮ ನೆಚ್ಚಿನ ತಾಣ ಎಂದುಕೊಂಡಿದ್ದೇವೆ. ನಮ್ಮನ್ನೆಲ್ಲಾ ಅನಾಥರನ್ನಾಗಿ ಮಾಡಬೇಡಿ.' ಎಂದು ಕೂಗಿ ಹೇಳಬೇಕೆನಿಸುತ್ತಿತ್ತು ಮೇಜಿಗೆ. ನಿಜ ಕೆಲವು ಮೇಜಿನ ಕಾಲುಗಳು ಮುರಿದಿವೆ.

ಕೆಲವು ಕುರ್ಚಿಗಳು ಬಳುಕಾಡುತ್ತಿವೆ. ಆದರೆ ಈ ಮೇಜು ಸದೃಢವಾಗಿದೆ. ತೇಗದ ಮೇಜಲ್ಲವೇ? ಎಲ್ಲವೂ ನೆನಪು ಮಾತ್ರ. ಆ ವಿದೇಶಿ ಗ್ರಾಹಕ ಒಂದೆರೆಡು ಸಲ ಬಂದಿದ್ದ. ದೋಸೆಯನ್ನು ಫೋರ್ಕುಗಳಲ್ಲಿ ಮುರಿಯಲು ಹರ ಸಾಹಸ ಮಾಡಿ ಕೊನೆಗೆ ಅಕ್ಕಪಕ್ಕ ನೋಡಿ ಕೈ ಬೆರಳುಗಳಲ್ಲಿ ತಿಂದಿದ್ದ. ಎದುರಿಗಿದ್ದ ಸರಕಾರಿ ಕಚೇರಿಯ ಸಿಬ್ಬಂದಿ ಕಾಫೀ ಹೀರಲು ಬರುತ್ತಿದ್ದರು.

